# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಅಅ/ಟಿ.ವಿ.ಸಿ.ಸಿ./ಜಿಎಲ್/46/ದಾ/09-10

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕ: 14.07.2009

ರವರಿಗೆ,
ಅಧೀಕ್ಷಕ ಇಂಜಿನಿಯರ್ (ವಿ),
(ವಾ. ಕಾ ಮತ್ತು ಪಾ) ರವರ ಕಛೇರಿ,
ಬೆಂಗಳ್ರರು ವೃತ್ತ(ಉತ್ತರ), ನೃ.ತು.ರಸ್ತೆ,
ಬೆಂಗಳೂರು-01.

ವಿಷಯ: ದಾಸರಹಳ್ಳಿ ವಲಯ ವ್ಯಾಪ್ತಿಯ , ಗೆಳೆಯರ ಬಳಗ, ಚಿಕ್ಕಸಂದ್ರ ಹಳ್ಳಿ
ಸ್ವತ್ತಿನ ಸಂಖ್ಯೆ-741 ರಲ್ಲಿನ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: ಸಂ: ಕಾನಿಇಂ/ಉವಿ/ಸಕಾಇಂ(ಕ)/ಕಿಇಂ1/2672-73 ದಿನಾಂಕ: 01.07.2009

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸ್ವತ್ತಿನ ಸಂಖ್ಯೆ-10/1 ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಸಲ್ಲಿಸಿರುವ ನೀಲಿ ನಕ್ಷೆಯ ಮಂಜೂರಾತಿಯ ಬಗ್ಗೆ ಪರಿಶೀಲಿಸಿ ಧೃಡೀಕರಿಸಬೇಕಾಗಿ ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 01.07.2009 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿನ ಕಟ್ಟಡವನ್ನು ದಿನಾಂಕ: 13.07.2009 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.- ದಾಸರಹಳ್ಳಿ) ರವರು ಪರಿವೀಕ್ಷಿಸಿರುತ್ತಾರೆ. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಮಂಜೂರಾತಿ ನಕ್ಷೆಯ ಬಗ್ಗೆ ಸಹಾಯಕ ನಿರ್ದೇಶಕರು ನಗರಯೋಜನೆ (ದಾಸರಹಳ್ಳಿ ವಲಯ) ರವರನ್ನು ವಿಚಾರಿಸಲಾಗಿ ನಕ್ಷೆಯು ಚಿಕ್ಕಬಾಣವಾರ ಗ್ರಾಮ ಪಂಚಾಯಿತಿಯಿಂದ ಮಂಜೂರಾತಿಯಾಗಿದ್ದು ಕಡತಗಳು ಹಸ್ತಾಂತರಗೊಳ್ಳದೆ ಮಾಹಿತಿಯು ಕಛೇರಿಯಲ್ಲಿ ಲಭ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ, ಸದರಿ ಸ್ವತ್ತಿನಲ್ಲಿ ವಸತಿ ಉಪಯೋಗಕ್ಕಾಗಿ ನೆಲ ಮತ್ತು ರಡು ಮೇಲು ಅಂತಸ್ತುಳ್ಳ ಕಟ್ಟಡವನ್ನು ನಿರ್ಮಿಸಲು ಚಿಕ್ಕಬಾಣವಾರ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ ರವರು (ಎಲ್.ಪಿ. ಸಂ.68/03-04) ದಿನಾಂಕ: 22/03/05 ರಂದು ನಕ್ಷೆ ಮಂಜೂರಾತಿ ನೀಡಿರುವುದು ಲಗತ್ತಿಸಿರುವ ನಕ್ಷೆಯಿಂದ ತಿಳಿದುಬಂದಿರುವುದಾಗಿಯೂ, ಕಟ್ಟಡದ ಕಾಮಗಾರಿಯು ಪೂರ್ಣಗೊಂಡಿದ್ದು, ನಿರ್ಮಾಣವನ್ನು ಮಂಜೂರಾತಿ ನಕ್ಷೆಯೊಂದಿಗೆ ಹೋಲಿಸಿದಾಗ ನಡುಜಾಗಗಳನ್ನು ಬಿಡದೆ (ಉಲ್ಲಂಘನೆ ಸರಾಸರಿ ಶೇ 100 ರಷ್ಟು) ನಿರ್ಮಿಸಿದ್ದು, ಬೇಸ್‌ಮೆಂಟ್ ಮತ್ತು ಮೂರನೇ ಅಂತಸ್ತನ್ನು ಅನಧಿಕೃತವಾಗಿ ನಿರ್ಮಾಣ ಮಾಡಿರುವುದಾಗಿ, ಪ್ರಾರಂಭಿಕ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು ಈ ಕಟ್ಟಡಕ್ಕೆ ಪಡೆದಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ.

ಸದರಿ ಕಟ್ಟಡವನ್ನು ಮಂಜೂರಾತಿ ನಕ್ಷೆಯಂತೆ ನಿರ್ಮಾಣ ಮಾಡದೇ ಕಟ್ಟಡ ಉಪವಿಧಿಗಳ ಉಲ್ಲಂಘನೆ ಮಾಡಿರುವುದರಿಂದ, ಈ ಕಟ್ಟಡವು ಮಂಜೂರಾತಿ ನಕ್ಷೆ/ಕಟ್ಟಡ ಉಪವಿಧಿಗಳಿಗೆ ಅನ್ವಯಿಸುವಂತೆ ಸುರಕ್ಷಿತವಾಗಿರುವುದಿಲ್ಲ. ವ್ಯತಿರಿಕ್ತ ಭಾಗಗಳನ್ನು ತೆರುವುಗೊಳಿಸಲು ಕೆ.ಎಂ.ಸಿ ಕಾಯ್ದೆ ಅನ್ವಯ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರಿಗೆ ಸೂಚಿಸಲಾಗಿರುತ್ತದೆ. ಆದ್ದರಿಂದ ಈ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ನೀಡದಂತೆ ಕ್ರಮ ವಹಿಸಲು ತಿಳಿಸಿದೆ.

S. Prasad 14/7/09
ಅಧೀಕ್ಷಕ ಅಭಿಯಂತರರು
ತಾಂತ್ರಿಕ ಹಾಗೂ ಜಾಗೃತ ಕೋಶ

ಅಧೀಕ್ಷಕರು (ವಿ) (ವಾ.ಕಾ. ಮತ್ತು ಪಾ.)
ಒಳಬಂದ ಸಂಖ್ಯೆ ...... 15-7-09
ದಿ......
ಬೆಂಗಳೂರು ಉತ್ತರ ವೃತ್ತ, ಟಿ.ಸಿ.ಆರ್. ಬೆಂಗಳೂರು - 1

1. ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಚೊಕ್ಕಲ್‌ಸಂದ್ರ) ರವರಿಗೆ ಕಳುಹಿಸುತ್ತಾ ಸದರಿ ಕಟ್ಟಡದಲ್ಲಿನ ಅನಧಿಕೃತ ನಿರ್ಮಾಣ/ಕಟ್ಟಡದ ಉಪವಿಧಿಗಳಿಗೆ ವ್ಯತಿರಿಕ್ತವಾಗಿ ನಿರ್ಮಿಸಿರುವ ಭಾಗಗಳನ್ನು ತೆರವುಗೊಳಿಸಲು ಕೆ.ಎಂ.ಸಿ. ಕಾಯ್ದೆ 1976 ಅನ್ವಯ ತೆಗೆದುಕೊಂಡ ಕ್ರಮಗಳ ಬಗೆಗಿನ ದಾಖಲೆಗಳನ್ನು ವಿವರವಾದ ವರದಿಯೊಂದಿಗೆ ಸಲ್ಲಿಸಲು ಸೂಚಿಸಿದೆ.

MF

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಅಅ/ಟಿ.ವಿ.ಸಿ.ಸಿ./ಜಿಎಲ್/51/ದಾ/09–10

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕ: 18/07/2009.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
(ವಾ,ಕಾ ಮತ್ತು ಪ) ರವರ ಕಛೇರಿ,
ಉತ್ತರ ವಿಭಾಗ, ಬೆ.ವಿ.ಕಂ.,
ರಾಜಾಜಿನಗರ ಬೆಂಗಳೂರು–10

ವಿಷಯ: ದಾಸರಹಳ್ಳಿ ವಲಯ ವ್ಯಾಪ್ತಿಯ, ಬೈರವೇಶ್ವರ ಇಂಡಸ್ಟ್ರಿಯಲ್ ಎಸ್ಟೇಟ್,ಅಂದರಹಳ್ಳಿ ಮುಖ್ಯ ರಸ್ತೆ, ಸ್ವತ್ತಿನ ಸಂಖ್ಯೆ–25 ರಲ್ಲಿನ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: ಕಾನಿಇಂ(ವಿ)/ಉವಿ/ಸಕಾಇಂ(ಕ)/ಕಿಇ೦1/2670–71/09–10, ದಿನಾಂಕ: 29.06.2009

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಶ್ರೀಮತಿ.ಲಕ್ಷ್ಮಮ್ಮ,W/o ಹೆಚ್.ತಿಮ್ಮಪ್ಪ, ಬೈರವೇಶ್ವರ ಇಂಡಸ್ಟ್ರಿಯಲ್ ಎಸ್ಟೇಟ್,ಅಂದರಹಳ್ಳಿ ಮುಖ್ಯ ರಸ್ತೆ, ಸ್ವತ್ತಿನ ಸಂಖ್ಯೆ–25 ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಸಲ್ಲಿಸಿರುವ ನೀಲಿ ನಕ್ಷೆಯ ಮಂಜೂರಾತಿಯ ಬಗ್ಗೆ ಪರಿಶೀಲಿಸಿ ಧೃಡೀಕರಿಸಬೇಕಾಗಿ ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 04/07/2009 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿನ ಸಂಬಂಧಿಸಿದಂತೆ ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–ದಾಸರಹಳ್ಳಿ) ಮಂಜೂರಾತಿ ನಕ್ಷೆಯ ಬಗ್ಗೆ ಸಹಾಯಕ ನಿರ್ದೇಶಕರು ನಗರಯೋಜನೆ (ದಾಸರಹಳ್ಳಿ ವಲಯ) ರವರನ್ನು ವಿಚಾರಿಸಲಾಗಿ ನಕ್ಷೆಯು ಹೇರೋಹಳ್ಳಿ ಗ್ರಾಮ ಪಂಚಾಯಿತಿಯಿಂದ ಮಂಜೂರಾತಿಯಾಗಿದ್ದು ಕಡತಗಳು ಹಸ್ತಾಂತರಗೊಳ್ಳದೆ ಮಾಹಿತಿಯು ಕಛೇರಿಯಲ್ಲಿ ಲಭ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ, ಅದ್ದರಿಂದ ಸದರಿ ಕಟ್ಟಡದ ನಕ್ಷೆ ಮಂಜೂರಾತಿ ಬಗ್ಗೆ ಧೃಡೀಕರಿಸಲು ಸಾಧ್ಯವಾಗಿರುವುದಿಲ್ಲ.

ಸದರಿ ಸ್ವತ್ತನ್ನು ದಿನಾಂಕ: 17/07/2009 ರಂದು ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–ದಾಸರಹಳ್ಳಿ) ರವರು ಹಾಗೂ ಸಹಾಯಕ ಅಭಿಯಂತರ ರವರೊಂದಿಗೆ ತಲಾಶು ಮಾಡಲಾಗಿ ಸದರಿ ಸ್ವತ್ತಿನ ವಿಳಾಸ ದೊರಕಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ.

ಮಂಜೂರಾತಿ ನಕ್ಷೆಯಲ್ಲಿ ನಮೂದಿಸಿರುವ ವಿಳಾಸದಲ್ಲಿನ ಕಟ್ಟಡವನ್ನು ತೋರಿಸಿದ್ದಲ್ಲಿ ಪರಿಶೀಲಿಸಿ ವರದಿಯನ್ನು ನೀಡಲಾಗುವುದೆಂದು ತಿಳಿಸಿದೆ.

S. Prakash 18/7/09
ಅಧೀಕ್ಷಕ ಅಭಿಯಂತರರು
ತಾಂತ್ರಿಕ ಹಾಗೂ ಜಾಗೃತ ಕೋಶ

Recd
Bha
18/7/09
MF

ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಿದೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಅಅ/ಟಿ.ವಿ.ಸಿ.ಸಿ./ಜಿಎಲ್/55/ದಾ/09–10

ಅಧೀಕ್ಷಕ ಅಭಿಯಂತರರ ಕಛೇರಿ,
ತಾಂತ್ರಿಕ ಹಾಗೂ ಜಾಗೃತಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು. ದಿನಾಂಕ: 27/07/2009.

ರವರಿಗೆ,
ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
(ವಾ,ಕಾ ಮತ್ತು ಪ) ರವರ ಕಛೇರಿ,
ಉತ್ತರ ವಿಭಾಗ, ಬೆ.ವಿ.ಕಂ.,
ರಾಜಾಜಿನಗರ ಬೆಂಗಳೂರು–10

ವಿಷಯ: ದಾಸರಹಳ್ಳಿ ವಲಯ ವ್ಯಾಪ್ತಿಯ, ಬ್ಯಾಡರಹಳ್ಳಿ, ಮಾಗಡಿ ಮುಖ್ಯ ರಸ್ತೆ,
ಸ್ವತ್ತಿನ ಸಂಖ್ಯೆ–127 ರಲ್ಲಿನ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ನೀಡುವ ಬಗ್ಗೆ.

ಉಲ್ಲೇಖ: ಕಾನಿಇಂ(ವಿ)/ಉವಿ/ಸಕಾಇಂ(ಕ)/ಕಿಇಂ1/3036–37/09–10, ದಿನಾಂಕ: 08.07.2009

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ, ಸ್ವತ್ತಿನ ಸಂಖ್ಯೆ–25 ರಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ವಿದ್ಯುತ್‌ಚ್ಛಕ್ತಿ ಸಂಪರ್ಕ ಕಲ್ಪಿಸುವ ಸಲುವಾಗಿ ಸಲ್ಲಿಸಿರುವ ನೀಲಿ ನಕ್ಷೆಯ ಮಂಜೂರಾತಿಯ ಬಗ್ಗೆ ಪರಿಶೀಲಿಸಿ ವರದಿ ನೀಡಲು ಕೋರಿರುತ್ತೀರಿ. ಉಲ್ಲೇಖಿತ ಪತ್ರವು ದಿನಾಂಕ: 16/07/2009 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಸದರಿ ಸ್ವತ್ತಿನಲ್ಲಿನ ಸಂಬಂಧಿಸಿದಂತೆ ಈ ವಿಭಾಗದ ಕಾರ್ಯಪಾಲಕ ಇಂಜಿನಿಯರ್ (ಟಿ.ವಿ.ಸಿ.ಸಿ.–ದಾಸರಹಳ್ಳಿ) ಮಂಜೂರಾತಿ ನಕ್ಷೆಯ ಬಗ್ಗೆ ಸಹಾಯಕ ನಿರ್ದೇಶಕರು ನಗರಯೋಜನೆ (ದಾಸರಹಳ್ಳಿ ವಲಯ) ರವರನ್ನು ವಿಚಾರಿಸಲಾಗಿ ನಕ್ಷೆಯು ಹೇರೋಹಳ್ಳಿ ಗ್ರಾಮ ಪಂಚಾಯಿತಿಯಿಂದ ಮಂಜೂರಾತಿಯಾಗಿದ್ದು ಕಡತಗಳು ಹಸ್ತಾಂತರಗೊಳ್ಳದೆ ಮಾಹಿತಿಯು ಕಛೇರಿಯಲ್ಲಿ ಲಭ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ, ಆದ್ದರಿಂದ ಸದರಿ ಕಟ್ಟಡದ ನಕ್ಷೆ ಮಂಜೂರಾತಿ ಬಗ್ಗೆ ಧೃಡೀಕರಿಸಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಸದರಿ ಸ್ವತ್ತಿನಲ್ಲಿನ (ಸ್ವತ್ತಿನ ಸಂಖ್ಯೆ–127) ನಿರ್ಮಾಣವನ್ನು ಪರಿವೀಕ್ಷಿಸಲಾಗಿ ಒಂದೇ ಸ್ವತ್ತಿನಲ್ಲಿ ಮೂರು ಪ್ರತ್ಯೇಕ ಕಟ್ಟಡಗಳಿರುವುದನ್ನು ಗಮನಿಸಲಾಗಿದೆಯೆಂದು ಈ ಮೂರು ಕಟ್ಟಡಗಳಲ್ಲಿ ಯಾವ ಕಟ್ಟಡಕ್ಕೆ ಪರಿಶೀಲನೆ ಮಾಡಿ ವರದಿ ಸಲ್ಲಿಸಬೇಕು ಎಂಬುದು ತಿಳಿಯುತ್ತಿಲ್ಲವೆಂದು ತಿಳಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಯಾವ ಕಟ್ಟಡದ ನಿರ್ಮಾಣದ ಬಗ್ಗೆ ವರದಿ ನೀಡಬೇಕೆಂದು ಸ್ಪಷ್ಟವಾಗಿ ತಿಳಿಸಿದ್ದಲ್ಲಿ ವರದಿ ನೀಡಲು ಕ್ರಮ ಕೈ ಗೊಳ್ಳಲಾಗುವುದು.

S. Prabhu 27/7/09
ಅಧೀಕ್ಷಕ ಅಭಿಯಂತರರು
ತಾಂತ್ರಿಕ ಹಾಗೂ ಜಾಗೃತ ಕೋಶ

28/7/09

ಪ್ರತಿಯನ್ನು ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಿದೆ.

MT